ಕೊಡಬೇಕಾಗುತ್ತದೆ, ಅವರನ್ನು ಬಿಟ್ಟು ಇನ್ನು ಯಾರು ಕೊಡುತ್ತಾರೆ. ನಾನು ವಿರೋಧ ಮಾಡಲು ಹೋಗುವುದಿಲ್ಲ. ಆದರೆ ಎಷ್ಟು ಪರಿಣಾಮಕಾರಿಯಾಗಿ ಆಗಬೇಕಾಗಿತ್ತೋ ಅಷ್ಟು ಪರಿಣಾಮಕಾರಿಯಾಗಿ ಆಗಲಿಲ್ಲ ಎಂದು ನೋವಿನಿಂದ ಹೇಳುತ್ತಿದ್ದೇನೆ. ಆದುದರಿಂದ ನಾನು ಸಭಾತ್ಯಾಗ ಮಾಡುತ್ತಿದ್ದೇನೆ. ನಾನು ನೆನ್ನೆ ಮೈಸೂರಿನಲ್ಲಿ ಇದ್ದೆ, ಮುಖ್ಯ ಮಂತ್ರಿಗಳೂ ಸಹ ಬಹಳ ಪ್ರಾಮಾಣಿಕವಾಗಿ ಬಂದರು, ಎಲ್ಲರ ಜೊತೆ ಮಾತನಾಡಿದರು, ಅಧಿಕಾರಿಗಳಿಗೆ ಹೇಳಿದರು, ಆದರೆ ಏನು ಹೇಳಿದರೂ, ಅಲ್ಲಿ ಅಷ್ಟು ಪರಿಣಾಮಕಾರಿಯಾಗಿ ಕೆಲಸ ಆಗುತ್ತಾ ಇಲ್ಲ. ಎಲ್ಲೋ ಒಂದು ತಪ್ಪು ಹೆಜ್ಜೆ ಇಡುತ್ತಿದ್ದೀರಿ. ಇದು ಕೇವಲ ಮೈಸೂರಿಗೆ ಅಲ್ಲ ಇಡೀ ರಾಜ್ಯಾದ್ಯಂತ ಮೂಲೆ, ಮೂಲೆಗಳಲ್ಲಿ ಹಬ್ಬುತ್ತಿದೆ. ಆದ್ದರಿಂದ ಇದರ ಬಗ್ಗೆ ಪರಿಣಾಮಕಾರಿಯಾಗಿ ಕ್ರಮ ಕೈಗೊಳ್ಳಬೇಕು. ಇದು ರಾಜ್ಯದ ಎಲ್ಲಾ ಕಡೆ ಹರಡುತ್ತಿದೆ ಎಂದು ನೋವಿನಿಂದ ಹೇಳಬೇಕಾಗಿದೆ.

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಹೆಚ್. ಏಕಾಂತಯ್ಯ:– ಈ ವಿಷಯ ಪ್ರಸ್ತಾಪ ನಾನು ಮಾಡಿದೆ, ನನಗೆ ಉತ್ತರ ಬರಲಿಲ್ಲ. ನಾನು ಚಿತ್ರದುರ್ಗದ ಬಗ್ಗೆ ಕೇಳುತ್ತಿದ್ದೇನೆ.

ಚಿತ್ರದುರ್ಗ ಮತ್ತು ಹಿರಿಯೂರು ತಾಲ್ಲೂಕುಗಳ ಬಗ್ಗೆ ನಾನು ನೇರವಾಗಿ ಪ್ರಸ್ತಾಪ ಮಾಡಿದೆ, 160 ನಮ್ಮ ಜಿಲ್ಲೆಯಲ್ಲಿ ಹಳ್ಳಿಯಲ್ಲಿ ಆಗಿದೆ ಎಂಬ ಮಾತನ್ನು ಹೇಳಿದಿರಿ, 9 ಪಟ್ಟಣಗಳು ಸೇರಿ ಸುಮಾರು ಹತ್ತು ಲಕ್ಷ ಜನ ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿ ಈ ಕಾಲರಾ ವ್ಯಾಧಿಯಿಂದ ಪೀಡಿತರಾದಂಥ ಜನರು ಇದ್ದಾರೆ. ಅವರಲ್ಲಿ ಎಲ್ಲರಿಗೂ ವ್ಯಾಕ್ಸಿನೇಷನ್ ಮಾಡುವುದಕ್ಕೆ ಆಗಿಲ್ಲ. ಶೇಕಡಾ 10ರಷ್ಟು ಮಾಡಿಲ್ಲ. ಅದಕ್ಕಿಂತ ಹೆಚ್ಚಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಶನಿವಾರ ಬೆಳಿಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಜಿಲ್ಲಾ ಮಂತ್ರಿಗಳಿಗೆ ಶನಿವಾರ ಬೆಳಿಗ್ಗೆ ನಾನು ತಂತಿ ಸಂದೇಶ ಕಳುಹಿಸಿದ ಮೇಲೆ ಏನಾದರೂ ಅಲ್ಲಿ ನಿಮ್ಮ ಸರ್ಕಾರ ಇದೆ ಎಂಬುದಕ್ಕೆ ಚುರುಕುಗೊಂಡಿದೆ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ನಾನು ಹೇಳಿದಂಥ ಲೋಪದೋಷಗಳು ಏನಿದೆ, ತಾವು ಇಲ್ಲಿ ಎಷ್ಟೇ ಆಶ್ವಾಸನೆ ಕೊಟ್ಟಿದ್ದರೂ ಸಹಾ ಕೆಳಹಂತದಲ್ಲಿ ಅದು ಜಾರಿಯಾಗಿಲ್ಲ. ಆದ್ದರಿಂದ ತಮಗೆ ನಾನು ಕೇಳುತ್ತಿದ್ದೇನೆ, ಅದನ್ನು ಜಾರಿ ಮಾಡುವಂಥ ವ್ಯವಸ್ಥೆಯನ್ನು ತಾವು ಕೂಡಲೇ ಮಾಡಲೇಬೇಕು. ತಾವು ಐದು ಲಕ್ಷ ಕೊಟ್ಟಿದ್ದೇವೆ ಎಂದು ಹೇಳಿದಿರಿ, ನಾನು ತಮಗೆ ಕೇಳುತ್ತೇನೆ, ಇಲ್ಲೇ ಇಟ್ಟುಕೊಂಡಿದ್ದೇನೆ, 5 ಲಕ್ಷ ಕೊಟ್ಟಿದ್ದರೆ, ಡ್ರಿಪ್ಸ್ ಸೆಟ್ ಇಲ್ಲದಂತೆ ಇರುತ್ತದೆಯೇ ಆಸ್ಪತ್ರೆಯಲ್ಲಿ? ಇವೆಲ್ಲಾ ನಮಗೆ ಅಲ್ಲಿ ಹೋದಾಗ ನೋವಾಗುತ್ತದೆ. ಮರದ ಕೆಳಗೆ ನೀವು ಹಂದಿಯನ್ನು ಮಲಗಿಸಿದ ಹಾಗೆ ಮಲಗಿಸಿ ಡ್ರಿಪ್ಸ್‌ನ್ನು ಅಂಗಡಿಯಿಂದ ತೆಗೆದುಕೊಂಡು ಬಾರೋ ಎಂದು ಹೇಳಿ ನಾನು ತಂದುಕೊಟ್ಟಮೇಲೆ ಅವರು ಹಾಕುವುದಾದರೆ, ಅದು ಸರಿಯೇ? ನಮ್ಮ ಒಂದು ತೀವ್ರವಾದಂಥ ದುಃಖವನ್ನು ತಾವು ಅರ್ಥಮಾಡಿಕೊಳ್ಳಬೇಕು. ಇಂಥ ಒಂದು ಪರಿಸ್ಥಿತಿ ಇದೆ. ತಾವು ಎಷ್ಟೇ ಹೇಳಿಕೆ ನೀಡಿದರು ಸಹ ಈ ಹಣ ಅಲ್ಲಿಗೆ ಹೋಗಿಲ್ಲ. ಅಥವಾ ನಿಮ್ಮ ವ್ಯವಸ್ಥೆ ಸರಿಯಾಗಿಲ್ಲ. ನಿಮ್ಮ ಆಡಳಿತ ವ್ಯವಸ್ಥೆ ಸರಿಯಾಗಿಲ್ಲ. ಎಷ್ಟು ಜನ ಜಾಯಿಂಟ್ ಡೈರೆಕ್ಟರ್‌ಗಳು ಇಲ್ಲಿಂದ ಹೋಗಿದ್ದಾರೆ ಚಿತ್ರದುರ್ಗಕ್ಕೆ ಸ್ವಾಮಿ? ಎಷ್ಟು ಜನ ಜಿಲ್ಲಾ ಆರೋಗ್ಯಾಧಿಕಾರಿಗಳು ಇದ್ದಾರಲ್ಲಾ, ಯಾವುದಾದರೂ ಹಳ್ಳಿಗೆ ಹೋಗಿದ್ದಾರಾ? ಇವುಗಳನ್ನು ತಾವು ನೋಡಿ ಎಂಬ ಮಾತನ್ನು ಹೇಳುತ್ತಿದ್ದೇನೆ, ತಾವು ಏನು ಹೇಳಿದ್ದೀರಿ, ಇದು ಕಾರ್ಯಗತವಾಗಿಲ್ಲ. ಕಾರ್ಯಗತವಾಗುವಂಥ ರೀತಿಯಲ್ಲಿ ಇವತ್ತಿನೊಳಗೆ ತಾವು ಮಾಡಬೇಕು ಎಂದು ಹೇಳಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸಚಿವರು ಮಧ್ಯಾಹ್ನದ ಮೇಲೆ